ಆ) ಸದರಿ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು ಹಾಗೂ ವೆಚ್ಚ ಮಾಡಿದ ಹಣವೆಷ್ಟು;

ಇ) ವೆಚ್ಚ ಮಾಡದೇ ಬಾಕಿ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು);

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯ 2009–10ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಯು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕಂದಾಯ ಇಲಾಖೆಯ ಯೋಜನೆಗಳಿಗೆ ಅನುದಾನ

603 (1237) ಶ್ರೀ ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10 ನೇ ಸಾಲಿನಲ್ಲಿ ಕಂದಾಯ ಇಲಾಖೆಯ Creation of New Districts, Creation of New Taluks ನ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಸದರಿ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು; ವೆಚ್ಚ ಮತ್ತು ಖರ್ಚು ಮಾಡಿದ ಮೊತ್ತವೆಷ್ಟು?

ಇ) ವೆಚ್ಚ ಮಾಡದೇ ಬಾಕಿ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು);

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ನೂತನ ಯಾದಗಿರಿ ಜಿಲ್ಲೆಯ ಪೂರ್ವಸಿದ್ಧತೆಗಾಗಿ 2009–10 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2053–00–800–0–01–059(ಯೋಜನೆ) ಅಡಿಯಲ್ಲಿ ರೂ.10.00 ಕೋಟಿ ಅನುದಾನ ಒದಗಿಸಲಾಗಿದೆ.

ಆ) ಯಾದಗಿರಿ ಜಿಲ್ಲೆಗೆ ರೂ. 5.00 ಕೋಟಿ ಬಿಡುಗಡೆ ಮಾಡಲಾಗಿದೆ. ಫೆಬ್ರವರಿ 2010ರ ಅಂತ್ಯಕ್ಕೆ 3,20,45, 000/– ಖರ್ಚಾಗಿದೆ.

ಇ) ರೂ.1,79,55,000/– ಬಾಕಿ ಉಳಿದಿರುತ್ತದೆ ಹಾಗೂ ಇದನ್ನು ಮಾರ್ಚ್ 2010 ರಲ್ಲಿ ಬರುವ ಬಿಲ್ಲುಗಳ ಪಾವತಿಗಾಗಿ ವೆಚ್ಚ ಮಾಡಲಾಗುವುದು.

ಚಿಂಚೋಳಿ ತಾಲ್ಲೂಕಿನಲ್ಲಿ I.C.L. ಕಂಪನಿ ನೌಕರರಿಂದ ಭೂ ಸುಧಾರಣೆ ಕಾಯ್ದೆ ಉಲ್ಲಂಘನೆ ಮಾಡಿ ಭೂ ಖರೀದಿ

604 (271) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಣಾಪೂರ ಮತ್ತು ಬುರಗಪಳ್ಳಿ ಗ್ರಾಮಗಳಲ್ಲಿ ಐ.ಸಿ.ಎಲ್. ಸಿಮೆಂಟ್ ಕಂಪನಿಯವರು ಭೂ ಸುಧಾರಣೆ ಕಾಯ್ದೆ 79ಎ, ಮತ್ತು 79ಬಿ, ಹಾಗೂ 80 ಉಲ್ಲಂಘಿಸಿ ಕಂಪನಿಯ ನೌಕರರ ಹೆಸರಿನ ಮೇಲೆ ಸುಮಾರು 80 ಎಕರೆ ಜಮೀನು ನೋಂದಣಿ ಮಾಡಿಕೊಂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಚಿಂಚೋಳಿ ತಾಲ್ಲೂಕು, ಬುರಗಪಳ್ಳಿ ಗ್ರಾಮದ ಸ.ನಂ.66/ಬಿ, 70,45,65,59,60,41,64,38/2,109,104,62,67,85,88,72,166,23,140,40, 101,117,36 ಮತ್ತು 87ರಲ್ಲಿ ಒಟ್ಟು ಸುಮಾರು 90 ಎಕರೆ ಜಮೀನುಗಳು.

1) J.V.V.S.N ಪ್ರಸಾದ ತಂದೆ: ಮಿರಾರಾಜು ಸಾ: ಚಂದಪೂರ ಹಾಗೂ 2) ಜೆ. ಬಾನು ಪ್ರಕಾಶ ತಂದೆ ಜೇ ಸೋಮಶೇಖರ ಸಾ: ಚಂದಾಪುರ ಇವರು ತಮ್ಮ ಸ್ವಂತ ಹೆಸರಿನಿಂದ ಖರೀದಿ ಮಾಡಿರುತ್ತಾರೆ. ಇವರು ಐ.ಸಿ.ಎಲ್. ಕಂಪನಿಯ ಅರೆ ಸಿಬ್ಬಂದಿಗಳು ಆಗಿರುತ್ತಾರೆ ಎಂದು ತನಿಖೆಯಿಂದ ತಿಳಿದು ಬಂದಿರುತ್ತದೆ. ತಹಶೀಲ್ದಾರರು ಚಿಂಚೋಳಿ ಇವರ ಕಾರ್ಯಾಲಯದಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 79ಎ ಮತ್ತು 79ಬಿ ಹಾಗೂ 80 ರ ಉಲ್ಲಂಘನೆ ವಿಷಯ ವಿಚಾರಣೆ ಹಂತದಲ್ಲಿ ಇರುತ್ತದೆ.